ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2007ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು" ಅಂಗೀಕರಿಸುವುದು.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>

(ಅನುಬಂಧ–1)

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ಅ) ವಿಷಯ: ಗುಲ್ಬರ್ಗದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇವತ್ತು ವೃತ್ತಿ ಶಿಕ್ಷಣ ಬಿಲ್ಲು ಇದೆಯೆಂದು ಸಚಿವರಾದ ಶಂಕರಮೂರ್ತಿಯವರು ಇಲ್ಲಿಗೆ ಬಂದಿದ್ದಾರೆ! ಗುಲ್ಬರ್ಗಾದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಆಗಲೇಬೇಕು. ಅದಕ್ಕಾಗಿ ಬಹಳಷ್ಟು ಕಡೆ ಗುಲ್ಬರ್ಗಾದಲ್ಲಿ ಉಪವಾಸ ಸತ್ಯಾಗ್ರಹವನ್ನು ಎಲ್ಲಾ ಪ್ರೊಪೆಸರ್‌ಗಳು ಮಾಡುತ್ತಿದ್ದಾರೆ. ನಂಜುಡಪ್ಪನವರ ವರದಿಯ ಪ್ರಕಾರ ಕೂಡ, ನಿನ್ನೆ ನಮ್ಮ ಪ್ರಕಾಶ್‌ರವರು ಅಲ್ಲಿಗೆ ಹೋಗಿದ್ದಾಗ, they have all represented. ಅದಕ್ಕೆ ಅವರು ಇವತ್ತು ಬಂದಿದ್ದಾರೆ ಮತ್ತು ವಿಧಾನ ಪರಿಷತ್ತಿನಲ್ಲಿ ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ. ಇವತ್ತು ಗುಲ್ಬರ್ಗಾ ಹಿಂದುಳಿದ ಪ್ರದೇಶ. ಆ ಭಾಗದಲ್ಲಿ Central University ಆಗತಕ್ಕ ಬಗ್ಗೆ ನಿಯೋಗ ಹೋಗುವುದಾಗಲೀ ಅಥವಾ ಕೇಂದ್ರದ ಅರ್ಜುನ್‌ಸಿಂಗ್‌ರವರಿಗೆ ಪತ್ರವನ್ನು ಸರ್ಕಾರ ಬರೆಯಬೇಕು ಎಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಂಜುಡಪ್ಪ ವರದಿಯಲ್ಲಿ specific ಆಗಿ ಒಂದು central university ಗುಲ್ಬರ್ಗಾದಲ್ಲೇ ಆಗಬೇಕೆಂದು ಹೇಳಿದ್ದಾರೆ. ಆ ರೀತಿ ಒಂದು specific recommendation ಇದ್ದಾಗಲೂ ಸಹ ಯಾರೋ ಒಬ್ಬರು ಅಧಿಕಾರಿ "ಇಲ್ಲ, ನಾವು ಮೈಸೂರಿನಲ್ಲಿ ಮಾಡಿಬಿಟ್ಟಿದ್ದೇವೆ" ಎಂದು ಹೇಳಿದ್ದಾರೆ. ಬೇರೆ ಕಡೆ ಮಾಡುತ್ತೇವೆ ಎಂದು ಮಾನ್ಯ ಶಂಕರಮೂರ್ತಿಯವರು ಹೇಳಿಲ್ಲ, ನಾವು ಗುಲ್ಬರ್ಗಾದಲ್ಲೇ ಶಿಫಾರಸ್ಸು ಮಾಡಿರುವಂತೆ ಮಾಡುತ್ತೇವೆಂದು council ನಲ್ಲಿ ಹೇಳಿದ್ದೀರಿ.

ತಾವು ಒಬ್ಬರು ಹಿರಿಯ ಹಾಗು ಒಳ್ಳೆಯ ಸಚಿವರು, ತಾವು ಆ ರೀತಿ ಹೇಳಿಕೆ ಕೊಟ್ಟ ಮೇಲೆ ತಮ್ಮ ವಿರುದ್ಧವಾಗಿ ತಮ್ಮ ಅಧಿಕಾರಿಗಳು ಹೇಳಿಕೆ ಕೊಡುತ್ತಾರೆಂದರೆ ನೀವು ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ತಾವು ಅದನ್ನು ಗುಲ್ಬರ್ಗಾದಲ್ಲೇ ಮಾಡುತ್ತೇವೆ ಎಂದು ಈ ಮನೆಯಲ್ಲಿ ಕಮಿಟ್ ಮಾಡಬೇಕು.

ಶ್ರೀ ಬಿ.ಆರ್. ಪಾಟೀಲ್: ನಮ್ಮ ಮಂತ್ರಿಗಳು ಬಹಳ ಉದಾರವಾದಿಗಳು. ಈ ವಿಷಯದಲ್ಲಿ ಕರ್ನಾಟಕದಲ್ಲಿ ಎಷ್ಟೊಂದು ನಿಷ್ಪಕ್ಷಪಾತವಾಗಿ ನಡೆದುಕೊಂಡಂಥ ಮಂತ್ರಿಯವರು ಇಡೀ ಕ್ಯಾಬಿನೆಟ್‌ನಲ್ಲಿ ಯಾರು ಕೂಡ ಇಲ್ಲ ಎಂಬುದನ್ನು ನಾನು ಬಹಿರಂಗವಾಗಿ ಹೇಳುತ್ತೇನೆ. ಅವರು ಇಡೀ ರಾಜ್ಯದ ದೃಷ್ಟಿಕೋನದ ಒಂದು vision ಇಟ್ಟುಕೊಂಡಿದ್ದಾರೆ. ಅವರಿಗೆ ನಮ್ಮ ಭಾಗದ ಬಗ್ಗೆ ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ. ಆದರೆ ಇದ್ದಂಥ ಗುಲ್ಬರ್ಗಾ ವಿಶ್ವವಿದ್ಯಾನಿಲಯವನ್ನೇ central university ಯನ್ನಾಗಿ convert ಮಾಡುವ ಪ್ರಯತ್ನ ಮಾಡಬೇಡಿ. ನೀವು ಪ್ರತ್ಯೇಕವಾಗಿ ಇದಕ್ಕೆ ಒಂದು university ಮಾಡಬೇಕು. ಆಗ ಮಾತ್ರ ಅದಕ್ಕೆ ಒಂದು ಹೊಸ ರೂಪ, ಬದಲಾವಣೆ ತರಲು ಸಾಧ್ಯವಿದೆ. ಅದನ್ನು ಮಾನ್ಯ ಶಂಕರಮೂರ್ತಿಯವರು ಮಾಡುತ್ತಾರೆ ಎಂದು ಭರವಸೆ ಇದೆ. ಯಾವುದೋ ಅಧಿಕಾರಿ ಏನೋ ಹೇಳಿದ್ದಾರೆ ಎಂಬುದೆಲ್ಲ ನಡೆಯುತ್ತಿದೆ. ಆದರೆ ಅವರು ದಿಟ್ಟವಾದ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಯಾವುದಕ್ಕೂ ಅವರು ಮಣಿದಿಲ್ಲ. ಯಾರಿಗೂ ಬೇರೆಯವರಿಗೆ ಅವರು file ನ್ನು ಕೊಟ್ಟಿಲ್ಲ. ಅವರು ಸ್ವಂತ ನಿರ್ಣಯವನ್ನು ಮಾಡಿದ ಕಾರಣಕ್ಕಾಗಿ 104 ಡಿಗ್ರಿ ಕಾಲೇಜುಗಳನ್ನು ಕೊಟ್ಟು ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವನ್ನು ಮಾಡಿದ್ದಾರೆ. ಇದು ಒಂದು ದಾಖಲೆ ಸಹ ಆಗಿದೆ. ಗ್ರಾಮೀಣ ಭಾಗದಲ್ಲಿ ಡಿಗ್ರಿ ಕಾಲೇಜುಗಳನ್ನು ಕೊಡುವ ಬಹಳ ದಿಟ್ಟವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ಅದಕ್ಕಾಗಿ ಮಾನ್ಯ ಶಂಕರಮೂರ್ತಿಯವರನ್ನು ಅಭಿನಂದಿಸುತ್ತೇನೆ. ಇವತ್ತು ಗುಲ್ಬರ್ಗಾದಲ್ಲಿ ಒಂದು ಪ್ರತ್ಯೇಕವಾದ central university ನ್ನು ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್: ಹೈದ್ರಾಬಾದ್‌ನಲ್ಲಿ central university ಸ್ಥಾಪನೆಯಾದಾಗ Separate ತೆಲಂಗಾಣ ಮೂವ್‌ಮೆಂಟ್ ಪ್ರಾರಂಭವಾಗಿತ್ತು ಆಗ 371ಗೆ ಅಮೆಂಡ್‌ಮೆಂಟ್ ಮಾಡುವುದರ ಜೊತೆಗೆ central university ಮಾಡುವುದು, ಇಂಥ ಅನೇಕ ಸೌಲಭ್ಯಗಳು ಅಲ್ಲಿ ಕೊಟ್ಟಿವೆ. ಆದ್ದರಿಂದ ಇದನ್ನು ಗುಲ್ಬರ್ಗಾದಲ್ಲೇ ಮಾಡಬೇಕೆಂದು ನಂಜುಂಡಪ್ಪ ವರದಿಯಲ್ಲೂ ಬಂದಿದೆ. ಅನೇಕ ಶಿಫಾರಸ್ಸುಗಳು ಇದೆ. ಅದರಲ್ಲಿ ಇದೂ ಸಹ ಒಂದು ಶಿಫಾರಸ್ಸು ಇದೆ. ಆ ದೃಷ್ಟಿಯಿಂದ ಕಲಂ 371ಕ್ಕೆ ತಿದ್ದುಪಡಿ ತರಬೇಕು ಮತ್ತು ಕೂಡಲೇ ತಾವು ಗುಲ್ಬರ್ಗಾದಲ್ಲಿ ಈ central university ನ್ನು ಮಾಡಬೇಕು ಎಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಕೇಂದ್ರೀಯ ವಿಶ್ವದ್ಯಾನಲಯದ ಸ್ಥಾಪನೆ ಕರ್ನಾಟಕ ರಾಜ್ಯದಲ್ಲಿ ಆಗಬೇಕು ಎಂಬ ಇಚ್ಛೆ, ನಮ್ಮೆಲ್ಲರಿಗೂ ಇದೆ. ಇದಕ್ಕೆ ಹಿನ್ನೆಲೆಯಾಗಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಪ್ರಾಂತೀಯ ಅಸಮತೋಲನ ನಿವಾರಣೆಗಾಗಿ ಡಾ:ನಂಜುಂಡಪ್ಪ ಸಮಿತಿಯನ್ನು ನೇಮಕ ಮಾಡಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಆ ವರದಿಯ ಒಂದು ಭಾಗದ ಒಂದು ವಾಕ್ಯವನ್ನು ಓದುತ್ತೇನೆ. "ಈ ಪ್ರದೇಶದ ಸರ್ವತೋಮುಖ ಬೆಳವಣಿಗೆಗಾಗಿ ಅವಶ್ಯಕ ಆರ್ಥಿಕ ಬೆಂಬಲವನ್ನು ನೀಡುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಹಾಗೂ ಇತರ ಸಂಸ್ಥೆಗಳಿಗೆ ಶಿಫಾರಸ್ಸು ಮಾಡಿದೆ. ಈ ಪ್ರದೇಶದಲ್ಲಿ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರಗಳಾದ C.S.I.R., I.C.S.S.R., I.C.M.R., I.C.H.R., I.I.M., I.I.T., ಮುಂತಾದ ಸಂಸ್ಥೆಗಳು ಇಲ್ಲದೇ ಇರುವುದರಿಂದ ಕೇಂದ್ರೀಯ ವಿಶ್ವವಿದ್ಯಾನಿಲಯವನ್ನು ಗುಲ್ಬರ್ಗಾದಲ್ಲಿ ಸ್ಥಾಪಿಸುವಂತೆ ಸದರಿ ಸಮಿತಿಯು ಶಿಫಾರಸ್ಸು ಮಾಡಿದೆ. "ಇದು ಸ್ಪಷ್ಟವಾಗಿದೆ. ಆದರೆ, ಇವತ್ತು ಕೇಂದ್ರೀಯ ವಿಶ್ವವಿದ್ಯಾನಿಲಯ ಕರ್ನಾಟಕಕ್ಕೆ ಕೊಡಬೇಕು ಎಂದು ಹೇಳಿ ಕೇಂದ್ರದಿಂದ ಯಾವುದೂ ವರದಿ ಬಂದಿಲ್ಲ. ಆದರೆ Sam Pitroda ರವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿರುವಂಥ ಒಂದು reforms committee ಒಂದು ವರದಿ ಕೊಟ್ಟಿದೆ. ಕೇಂದ್ರೀಯ ವಿಶ್ವವಿದ್ಯಾನಿಲಯಗಳು ದೇಶದಲ್ಲೆಲ್ಲಾ ಆಗಬೇಕು, ಹಾಗಾಗಿ ಕರ್ನಾಟಕಕ್ಕೂ ಆಗಬೇಕು ಎಂಬ ಚರ್ಚೆ ನಡೆಯುತ್ತಿದೆ.

ಯಾವುದೇ ನಿರ್ಣಯಗಳು ಆಗಿಲ್ಲ. ನಮ್ಮನ್ನೂ ಕೇಳಿಲ್ಲ. ನಿಮಗೆ ಯಾವುದಾದರೂ ಕೇಂದ್ರೀಯ ವಿಶ್ವವಿದ್ಯಾನಿಲಯವನ್ನು ಮಾಡಬೇಕು ಎಂದು ಇದ್ದೇವೆ ಎಲ್ಲಿ ಮಾಡಬೇಕು ಎಂಬ ರೀತಿಯ ಪ್ರಸ್ತಾವನೆ ಅವರಿಂದ ಬಂದಿಲ್ಲ. ಆದರೆ ಸರ್ಕಾರ ನಾವೇ suo motu ಕೇಂದ್ರೀಯ ವಿಶ್ವವಿದ್ಯಾನಿಲಯ ನಮಗೆ ಬೇಕು, ಅದನ್ನು ನಂಜುಂಡಪ್ಪ ವರದಿಯ ಆಧಾರದ ಮೇಲೆ ಗುಲ್ಬರ್ಗಾದಲ್ಲಿ ಮಾಡಿ ಎನ್ನುವ ಮನವಿಯನ್ನು ಕಳಿಸುವವರಿದ್ದೇವೆ. ಅದನ್ನು ಇನ್ನು ಕಳುಹಿಸಿಲ್ಲ. ಅದನ್ನು ಕಳುಹಿಸುತ್ತೇವೆ. ಈ ಮಾತನ್ನು ನಾನು ಸರ್ಕಾರದ ಪರವಾಗಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಅದನ್ನು Withdraw ಮಾಡುವುದಕ್ಕೆ ಹೇಳಬೇಕು. ಅದಕ್ಕೆ ತಾವು ಮನವಿ ಮಾಡಬೇಕು. ಏಕೆಂದರೆ ತಾವು ಸಂಬಂಧಪಟ್ಟ ಸಚಿವರಾಗಿದ್ದೀರಿ. ಅವರು ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಆದ್ದರಿಂದ ಈ ಸದನದ ಮೂಲಕ ನಾವು ಅದಕ್ಕೆ ಹೇಗೂ ಶಿಫಾರಸ್ಸು ಮಾಡುತ್ತೇವೆ. Withdraw ಮಾಡಿ ಎಂದು ಹೇಳಿ.

ಶ್ರೀ ಧರ್ಮಸಿಂಗ್: 30 ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ಬಗ್ಗೆ Human Resources Ministryನಲ್ಲಿ ಚಿಂತನೆ ನಡೆಯುತ್ತಿದೆ. ತಾವು ಹೇಳಿದ್ದೀರಿ, ಸಂತೋಷ. ತಾವೂ ಕೂಡ ಸರ್ಕಾರದ ಪರವಾಗಿ ಒಂದು ಪತ್ರವನ್ನು ಬರೆಯಿರಿ. ನೀವು ಒಂದು ವೇಳೆ ನಿಯೋಗ ಕರೆದುಕೊಂಡು ಹೋಗುವುದಾದರೆ ನಾವು ಸಹ ಸಿದ್ಧರಿದ್ದೇವೆ. ತಾವೇ ಸಮಕ್ಷಮ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡುವ ಬಗ್ಗೆ ಭರವಸೆ ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ನಿನ್ನೆ ಡಾ:ನಂಜುಂಡಪ್ಪನವರ ವರದಿಯ ಮೇಲೆ ಈಗಾಗಲೇ ಆರು ಜಿಲ್ಲೆಗಳ ಶಾಸಕರು ಸಭೆ ನಡೆಸಿದ್ದೇವೆ. ಬಿ.ಆರ್. ಪಾಟೀಲರು ಆ ಸಭೆಯನ್ನು ಕರೆದಿದ್ದರು. ಮಾನ್ಯ ಗೃಹ ಸಚಿವರು ಸಹ ಆ ಸಭೆಯಲ್ಲಿ ಹಾಜರಿದ್ದರು. ನಿನ್ನೆ ಇದರ ಬಗ್ಗೆ ಕೇಳಿದಾಗ ಇವತ್ತು ಕೊಡುತ್ತೇನೆಂದು ಹೇಳಿದ್ದೀರಿ. ಈಗ ಮಾಧುಸ್ವಾಮಿಯವರು ಮೊದಲು ಅವರ ವಿಚಾರವನ್ನು ಪ್ರಸ್ತಾಪ ಮಾಡಲಿ. ಅವರು ಮಾಡಿದ ಮೇಲೆ ಆ ನಿಲುವಳಿ ಸೂಚನೆಗೆ 69ರ ಅಡಿಯಲ್ಲಿ

ಪರಿವರ್ತನೆ ಮಾಡಿ ಅದರ ಬಗ್ಗೆ ಇವತ್ತು ಬಹಳಷ್ಟು ವಿವರವಾದ ಚರ್ಚೆ ಆಗಬೇಕು. ಆ ಭಾಗದ ಜನರಿಗೆ ಆಗತಕ್ಕಂತಹ ಅನ್ಯಾಯವನ್ನು ತಡೆಗಟ್ಟತಕ್ಕಂತಹ ವಿಚಾರಗಳನ್ನು ನಾವು ಏನು ಹೇಳುತ್ತೇವೆ, ಅದಕ್ಕೆ ಮಂತ್ರಿಗಳಿದ್ದಾರೆ, ಸರ್ಕಾರ ನಿರ್ದಿಷ್ಟವಾದ ಉತ್ತರ ಕೊಡಬೇಕು.

ಅಧ್ಯಕ್ಷರು: ಶರಣ್‌ಪ್ರಕಾಶ್‌ರವರೇ ಕುಳಿತುಕೊಳ್ಳಿ. ಸಮಯ ಎಲ್ಲಾ ಹಾಳು ಮಾಡುತ್ತೀರಿ. Clear ಆಗಿ ಹೇಳಿದ್ದಾರೆ ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಅವರ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಸದನದ ಮುಖಾಂತರ ಮನವಿ ಮಾಡಲಿ. ಅದು ಮಾಡಿದರೆ ಅವರಿಗೇ ಒಳ್ಳೆಯದು ಎಂದು ಹೇಳುತ್ತಿದ್ದೇವೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಸರಿ ಇದೆ. ನಮ್ಮ ರಾಜ್ಯದ ಪರವಾಗಿ, ಗುಲ್ಬರ್ಗಾ ಭಾಗದ ಜನತೆ ಪರವಾಗಿ ಅಲ್ಲಿ ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ನಾನೂ ಕೂಡ ಅವರ ಜೊತೆ ಧ್ವನಿಗೂಡಿಸುತ್ತೇನೆ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರೂ ಇದಕ್ಕೆ ಧ್ವನಿಗೂಡಿಸುತ್ತಾರೆ ಅಂದುಕೊಂಡಿದ್ದೇನೆ. ಸತ್ಯಾಗ್ರಹವನ್ನು ಕೈಬಿಡಿ, ನಿಮ್ಮ ಪರವಾಗಿ ನಾವಿದ್ದೇವೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಗುಲ್ಬರ್ಗಾದಲ್ಲಿ ಬೇರೆ ಬೇರೆ ಕಾರ್ಯಕ್ರಮಗಳಿಗಾಗಿ ಹೋಗಿದ್ದೆ, ಮಾನ್ಯ ಪ್ರತಿ ಪಕ್ಷದ ನಾಯಕರು ಹೇಳಿದಂತೆ ಕೇಂದ್ರೀಯ ವಿಶ್ವವಿದ್ಯಾನಿಲಯ ಆಗಬೇಕು ಎನ್ನತಕ್ಕಂತಹ ವಿಚಾರದಲ್ಲಿ ಬಹಳ ದೊಡ್ಡ ಹೋರಾಟ ಮಾಡಿ ಅನೇಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರೆಲ್ಲರೂ ಒಂದು ಮನವಿಯನ್ನು ಅರ್ಪಿಸಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನೂ ಈ ವಿಚಾರವನ್ನು ತರುತ್ತೇನೆ. ಅದರ ಜೊತೆಗೆ ಈ ವಿಷಯದಲ್ಲಿ ಏನಾದರೂ ಸಹಕಾರ ಬೇಕೆನ್ನುವುದಾದರೆ, ನಾಳೆ ಪ್ರಧಾನ ಮಂತ್ರಿಗಳು ಬರುತ್ತಾರೆ, ನಿಮ್ಮ ಮನವಿಯನ್ನು ಕೊಡಿ, ನಾವು ಪ್ರತಿ ಪಕ್ಷದ ನಾಯಕರು, ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳಿಗೆ

ಕಲೆತು ಮಾನ್ಯ ಪ್ರಧಾನಮಂತ್ರಿಗಳಿಗೆ ಈ ವಿಚಾರದಲ್ಲಿ ಮನವಿ ಕೊಡುತ್ತೇವೆಂದು ಹೇಳಿ, ಕನಿಷ್ಠ ಪಕ್ಷ ತಾವು ಉಪವಾಸ ಸತ್ಯಾಗ್ರಹವನ್ನು ಸ್ಥಗಿತಗೊಳಿಸಬೇಕೆಂದು ಹೇಳಿ ವಿನಂತಿ ಮಾಡಿಕೊಂಡೆ. ಕನಿಷ್ಠ ಪಕ್ಷ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳದೇ ಹೋದರೆ, ಮುಂದಿನ ನಿರ್ಣಯವಾಗುವವರೆಗಾದರೂ ಹೋರಾಟವನ್ನು ಸ್ಥಗಿತಗೊಳಿಸಬೇಕೆಂದು ಹೇಳಿದ್ದೆ. ಆ ಭಾವನೆಗೆ ಅನುಗುಣವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯವನ್ನು ತಿಳಿಸಿದ್ದಾರೆ. ಸರ್ಕಾರಕ್ಕೆ ಸಂಪೂರ್ಣ ಸಹಾನುಭೂತಿ ಇದೆ.

ಅಧ್ಯಕ್ಷರು: ಒಂದೆರಡು ಬಿಲ್ಲುಗಳು ಇವೆ.

ಶ್ರೀ ಧರ್ಮಸಿಂಗ್: ಬಿಲ್ಲುಗಳನ್ನು ನಂತರ ತೆಗೆದುಕೊಳ್ಳಿ.

ಅಧ್ಯಕ್ಷರು: ಸರ್ಕಾರದ ಬಿಲ್ಲುಗಳು ಯಾವಾಗ ಪಾಸ್ ಮಾಡುವುದು ಎಂದು ಪ್ರಶ್ನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. ನಾವು ಒಂದು ಗಂಟೆ ಅವರು ಒಂದು ಗಂಟೆ ಮಾತನಾಡುತ್ತೇವೆ. ನಂತರ ಬಿಲ್ಲುಗಳನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ನಿಯಮ 69ರ ಕೆಳಗೆ ದಿನಗಟ್ಟಲೆ ಮಾತನಾಡಿರತಕ್ಕಂತಹ ಪ್ರಕರಣಗಳು ಇಲ್ಲಿ ನಡೆದುಕೊಂಡು ಬರುತ್ತಿವೆ. ನಿಯಮ 69ರ ಕೆಳಗೆ ಮಾಧುಸ್ವಾಮಿಯವರು ಕೊಟ್ಟಿರತಕ್ಕಂಥದ್ದು convert ಮಾಡಿದ್ದೇನೆ, ನಾನು ಒಂದು ಗಂಟೆ ಅವಕಾಶ ಕೊಡುತ್ತೇನೆ. ಚರ್ಚೆ ಮತ್ತು ಉತ್ತರ ಒಂದು ಗಂಟೆಯೊಳಗೆ ಮುಗಿಯಬೇಕು. ಅದೇ ರೀತಿ ಮಾನ್ಯ ಬಿ.ಆರ್.ಪಾಟೀಲರು ಮತ್ತು ಸ್ನೇಹಿತರು ಕೊಟ್ಟಿರುವುದಕ್ಕೂ ಒಂದು ಗಂಟೆ ಕಾಲಾವಕಾಶ ಕೊಡುತ್ತೇನೆ, ಅದೂ ಕೂಡ ಚರ್ಚೆ ಮತ್ತು ಉತ್ತರ ಮುಗಿಯಬೇಕು. ಅದು ಸುಮ್ಮನೆ ದಿನಗಟ್ಟಲೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್: ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆದಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.